## ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 715

ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 21.02.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬಿ.ಎಂ.ಟಿ.ಸಿ./ ಕೆ.ಎಸ್.ಆರ್.ಟಿ.ಸಿ/ ಎನ್‌ಡಬ್ಲ್ಯೂ.ಕೆ.ಎಸ್.ಆರ್‌ಟಿ.ಸಿ./ ಕೆ.ಕೆ.ಆರ್.ಟಿ.ಸಿ ನಿಗಮಗಳಲ್ಲಿ ನೌಕರರ ವರ್ಗಾವಣೆ ಕುರಿತು ಈ ಹಿಂದೆ ಸಮಾಲೋಚನೆ ವ್ಯವಸ್ಥೆ ಜಾರಿಯಲ್ಲಿದ್ದು, ಸದರಿ ವ್ಯವಸ್ಥೆ ಈಗಲೂ ಜಾರಿಯಲ್ಲಿದೆಯೇ; ಮತ್ತು ಈ ನಿಗಮಗಳಲ್ಲಿ ಪ್ರತಿಯೊಂದು ವಿಭಾಗದಲ್ಲಿ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಈ ಕುರಿತು ಸರ್ಕಾರದ ಕ್ರಮಗಳೇನು: | ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳು ಸ್ವತಂತ್ರ ರಸ್ತೆ ಸಾರಿಗೆ ನಿಗಮಗಳಾಗಿರುತ್ತವೆ. ನಿಗಮಗಳ ದರ್ಜೆ-3 ಮೇಲ್ವಿಚಾರಕೇತರ ಹಾಗೂ ದರ್ಜೆ-4 ನೌಕರರುಗಳಿಗೆ ಆನ್‌ಲೈನ್ ಕೌನ್ಸಿಲಿಂಗ್ ಮೂಲಕ ಅಂತರ್ ನಿಗಮ ವರ್ಗಾವಣೆಯನ್ನು ವರ್ಷಕ್ಕೆ ಒಂದು ಬಾರಿ ಮಾಡಲಾಗುತ್ತಿದೆ.<br><br>**<u>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ</u>**<br><br>ನಿಗಮದಲ್ಲಿ ಡಿಸೆಂಬರ್-2023ರ ಅಂತ್ಯಕ್ಕೆ 7210 ಹುದ್ದೆಗಳು ಖಾಲಿ ಇರುತ್ತವೆ ಹಾಗೂ ಮುಂಬಡ್ತಿಗೆ ಮೀಸಲಿರುವ ಹುದ್ದೆಗಳನ್ನು ಸಂಸ್ಥೆಯ ಅಗತ್ಯತೆಗೆ ಅನುಗುಣವಾಗಿ ಆಗಾಗ್ಗೆ ಮುಂಬಡ್ತಿ ಮೂಲಕ ತುಂಬಲಾಗುತ್ತಿರುತ್ತದೆ.<br><br>**ನಿಗಮದಿಂದ ಕಳೆದ 7 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ.** ಪ್ರಸ್ತುತ, ನಿಗಮದಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ 2000 ಚಾಲಕ-ಕಂ-ನಿರ್ವಾಹಕ ಹುದ್ದೆ ಹಾಗೂ 300 ತಾಂತ್ರಿಕ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.<br><br>**<u>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ</u>**<br><br>ಸಂಸ್ಥೆಯಲ್ಲಿ ಡಿಸೆಂಬರ್-2023ರ ಅಂತ್ಯಕ್ಕೆ 4309 ವಿವಿಧ ಶ್ರೇಣಿ/ ವೃಂದದ ಹುದ್ದೆಗಳು ಖಾಲಿ ಇರುತ್ತವೆ.<br><br>**ಸಂಸ್ಥೆಯಲ್ಲಿ ಕಳೆದ 04 ವರ್ಷಗಳಲ್ಲಿ ಯಾವುದೇ ಹುದ್ದೆಗಳ ನೇಮಕಾತಿ ಮಾಡಿಕೊಂಡಿರುವುದಿಲ್ಲ.**<br><br>2023-24ನೇ ಸಾಲಿನಲ್ಲಿ ಪ್ರಸ್ತುತ 2500 ನಿರ್ವಾಹಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | **ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**<br>ಪ್ರಸ್ತುತ ಸಂಸ್ಥೆಯಲ್ಲಿ 2123 ವಿವಿಧ ಶ್ರೇಣಿ/ ವೃಂದದ ಹುದ್ದೆಗಳು ಖಾಲಿ ಇರುತ್ತವೆ. ಸದರಿ ಹುದ್ದೆಗಳ ನೇಮಕಾತಿಗೆ ಕ್ರಮವಹಿಸಲಾಗುತ್ತಿದೆ.<br><br>**ಸಂಸ್ಥೆಯಲ್ಲಿ ಕಳೆದ 04 ವರ್ಷಗಳಿಂದ ನೇಮಕಾತಿ ಆಗಿರುವುದಿಲ್ಲ.**<br><br>ಸಂಸ್ಥೆಯಲ್ಲಿ ಪ್ರಸ್ತುತ 2000 ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದ್ದು, ಇನ್ನುಳಿದ ಖಾಲಿ ಹುದ್ದೆಗಳಲ್ಲಿ ಅವಶ್ಯಕವಾಗಿರುವ ಅಧಿಕಾರಿ ವೃಂದದ 45, ಮೇಲ್ವಿಚಾರಕ 97 ಹಾಗೂ 608 ಇತರೆ ಮೇಲ್ವಿಚಾರಕೇತರ ಹುದ್ದೆ ಸೇರಿದಂತೆ ಒಟ್ಟು 750 ಖಾಲಿ ಹುದ್ದೆಗಳ ನೇಮಕಾತಿಯ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**<br><br>ನಿಗಮದಲ್ಲಿ ಡಿಸೆಂಬರ್-2023ರ ಅಂತ್ಯಕ್ಕೆ 3381 ಹುದ್ದೆಗಳು ಖಾಲಿ ಇರುತ್ತವೆ.<br><br>ನಿಗಮದಲ್ಲಿ 925-ಚಾಲಕ ಮತ್ತು 694-ಚಾಲಕ-ಕಂ-ನಿರ್ವಾಹಕ ಹುದ್ದೆಗಳು ಸೇರಿದಂತೆ ಒಟ್ಟು 1619 ಚಾಲನಾ ಹುದ್ದೆಗಳ ನೇಮಕಾತಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ:03.02.2024ರಂದು ಪ್ರಕಟಿಸಲಾಗಿದ್ದು, ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ:12.02.2024ರವರೆಗೆ ಅವಕಾಶ ನೀಡಲಾಗಿರುತ್ತದೆ. ಶೀಘ್ರವೇ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು.<br><br>300-ನಿರ್ವಾಹಕ ಮತ್ತು 15-ಸಹಾಯಕ ಲೆಕ್ಕಿಗ ಹುದ್ದೆಗಳ ನೇರ ನೇಮಕಾತಿಗಾಗಿ ಜಾಹೀರಾತು ಹೊರಡಿಸಲು ಕ್ರಮ ಜರುಗಿಸಲಾಗುತ್ತಿದೆ.<br><br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 36-ಹಿಂಬಾಕಿ ಹುದ್ದೆಗಳ ನೇರ ನೇಮಕಾತಿಗೆ ಜಾಹೀರಾತು ಅಧಿಸೂಚನೆ ಹೊರಡಿಸಲಾಗಿದೆ ಹಾಗೂ 51-ಗಣಕ ಸಹಾಯಕ ಮತ್ತು 08-ಅಂಕಿಅಂಶ ಸಹಾಯಕ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇರ ನೇಮಕಾತಿ ಮತ್ತು ಮುಂಬಡ್ತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.</td></tr>
<tr><td>ಆ.</td><td>ಸಾರಿಗೆ ಇಲಾಖೆಯ ನಿಗಮದಲ್ಲಿ ಎಷ್ಟು ಡಿಪೋಗಳು ಇವೆ ಮತ್ತು ಎಷ್ಟು ಕಾರ್ಯಾಗಾರಗಳು ಇವೆ : (ಜಿಲ್ಲಾವಾರು ಮಾಹಿತಿ ನೀಡುವುದು) ಹಲವಾರು ವರ್ಷಗಳಿಂದ ಸದರಿ ಕಾರ್ಯಾಗಾರಗಳನ್ನು ಮೇಲ್ದರ್ಜೆಗೇರಿಸದಿರಲು ಕಾರಣಗಳೇನು: ಹಾಗೂ ಈ ಕಾರ್ಯಾಗಾರಗಳನ್ನು ಯಾವಾಗ ಮೇಲ್ದರ್ಜೆಗೇರಿಸಲಾಗುವುದು: (ಮಾಹಿತಿ ನೀಡುವುದು)</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿನ ಡಿಪೋ ಮತ್ತು ಕಾರ್ಯಾಗಾರಗಳ ವಿವರ ಕೆಳಕಂಡಂತಿದೆ:-<br><br>
<table>
<tr><th rowspan="2">ಸಂಸ್ಥೆ</th><th rowspan="2">ಘಟಕ</th><th colspan="2">ಕಾರ್ಯಗಾರ</th></tr>
<tr><th>ವಿಭಾಗೀಯ</th><th>ಪ್ರಾದೇಶಿಕ</th></tr>
<tr><td>ಕ.ರಾ.ರ.ಸಾ.ನಿಗಮ</td><td>83</td><td>16</td><td>02</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>49</td><td>04</td><td>-</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>55</td><td>08</td><td>01</td></tr>
<tr><td>ಕ.ಕ.ರ.ಸಾ.ನಿಗಮ</td><td>52</td><td>09</td><td>01</td></tr>
<tr><td>ಒಟ್ಟು</td><td>239</td><td>37</td><td>04</td></tr>
</table>
<br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ<br><br>
ವಿಭಾಗೀಯ ಕಾರ್ಯಾಗಾರಗಳು ಸುಸಜ್ಜಿತವಾಗಿದ್ದು ಅವುಗಳಿಗೆ ಅವಶ್ಯಕವಿರುವ ಹೊಸ ಯಂತ್ರೋಪಕರಣ/ ಸಲಕರಣೆ ಇತ್ಯಾದಿಗಳನ್ನು ಆಗಿಂದಾಗ್ಗೆ ಒದಗಿಸಲಾಗುತ್ತಿದೆ.<br><br>
ಬೆಂಗಳೂರು ಹಾಗೂ ಹಾಸನ ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ಹಾಸನ ಪ್ರಾದೇಶಿಕ ಕಾರ್ಯಾಗಾರವು ಸುಮಾರು 100 ವರ್ಷದಷ್ಟು ಹಳೆಯದಾಗಿರುವ ಕಾರಣ ಪ್ರಸ್ತುತ ಸದರಿ ಕಾರ್ಯಾಗಾರವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಚಾಲ್ತಿಯಲ್ಲಿರುತ್ತದೆ.</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | **ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**<br><br>ಸಂಸ್ಥೆಯಲ್ಲಿರುವ 04 ಕಾರ್ಯಾಗಾರಗಳಲ್ಲಿ 02 ಹೊಸ ಕಾರ್ಯಾಗಾರಗಳಾಗಿದ್ದು, ಉಳಿದ 02 ಕಾರ್ಯಾಗಾರಗಳು ಹಳೆಯದಾಗಿದ್ದು ವಾಹನಗಳು/ಅಸೆಂಬ್ಲಿಗಳು/ಟೈರುಗಳ ಮರುವಪ್ಪ ದುರಸ್ಥಿ ಕಾರ್ಯಗಳನ್ನು ನಿರ್ವಹಿಸಲು ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಮಾಡಿಕೊಂಡು ದುರಸ್ಥಿ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.<br><br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**<br><br>ಸಂಸ್ಥೆಯಲ್ಲಿರುವ 8 ವಿಭಾಗೀಯ ಕಾರ್ಯಾಗಾರಗಳಲ್ಲಿ 03 ವಿಭಾಗೀಯ ಕಾರ್ಯಾಗಾರಗಳು ಸುಸಜ್ಜಿತವಾಗಿದ್ದು, 02 ವಿಬಾಗೀಯ ಕಾರ್ಯಾಗಾರಗಳನ್ನು ಹಾಗೂ ಒಂದು ಪ್ರಾದೇಶಿಕ ಕಾರ್ಯಾಗಾರವು ಶಿಥಿಲಾವಸ್ಥೆಯಲ್ಲಿದ್ದು ಮರು ನಿರ್ಮಿಸಬೇಕಿರುತ್ತದೆ. 03 ವಿಭಾಗೀಯ ಕಾರ್ಯಾಗಾರಗಳನ್ನು ಮೇಲ್ದರ್ಜೆಗೇರಿಸಬೇಕಾಗಿದೆ. ಅವಶ್ಯಕತೆ ಹಾಗು ಅನುದಾನದ ಲಭ್ಯತೆಯಂತೆ ಹಂತಹಂತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ಜರುಗಿಸಲಾಗುವುದು.<br><br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**<br><br>ನಿಗಮದಲ್ಲಿರುವ 09 ವಿಭಾಗೀಯ ಕಾರ್ಯಾಗಾರಗಳಲ್ಲಿ ಹೊಸಪೇಟೆಯಲ್ಲಿ ಘಟಕದ ಆವರಣದಲ್ಲಿ ತಾತ್ಕಾಲಿಕ ಕಾರ್ಯಾಗಾರವಾಗಿ ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ನಿವೇಶನದ ಲಭ್ಯತೆ ನಂತರ ಹೊಸದಾಗಿ ನಿರ್ಮಿಸಲು ಕ್ರಮ ವಹಿಸಲಾಗುವುದು. ರಾಯಚೂರ ವಿಭಾಗೀಯ ಕಾರ್ಯಾಗಾರವನ್ನು ಕಳೆದ ಸಾಲಿನಲ್ಲಿ ಮೇಲ್ದರ್ಜೆಗೇರಿಸಲಾಗಿದ್ದು, ಇನ್ನುಳಿದ ಕಾರ್ಯಾಗಾರಗಳನ್ನು ಅವಶ್ಯಕತೆ ಹಾಗೂ ಅನುದಾನದ ಲಭ್ಯತೆಯಂತೆ ಕಾಲಕಾಲಕ್ಕೆ ಮೇಲ್ದರ್ಜೆಗೇರಿಸಲಾಗುವುದು.<br><br>01 ಪ್ರಾದೇಶಿಕ ಕಾಯಾಗಾರವನ್ನು ಇತ್ತೀಚಿಗೆ ನಿರ್ಮಿಸಲಾಗಿದ್ದು, ಸುಸಜ್ಜಿತವಾಗಿದೆ. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ.</td><td>ಸಾರಿಗೆ ಇಲಾಖೆಯ ನಿಗಮಗಳ ಮೇಲಿರುವ ಒಟ್ಟು ಸಾಲವೆಷ್ಟು : ಪಡೆದಿರುವ ಸಾಲದ ಮೇಲೆ ಎಷ್ಟು ಬಡ್ಡಿ ಭರಿಸಲಾಗಿದೆ: ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟ ಎಷ್ಟು ಮಾಹಿತಿ ನೀಡುವುದು:</td><td>
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ<br><br>
ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ದಿನಾಂಕ:31-01-2024ರಲ್ಲಿದ್ದಂತೆ ಬಾಕಿ ಇರುವ ಸಾಲದ ವಿವರ ಕೆಳಗಿನಂತಿರುತ್ತದೆ:<br><br>
(ರೂ. ಕೋಟಿಗಳಲ್ಲಿ)
<table>
<tr><th>ಸಂಸ್ಥೆಗಳು</th><th>ಬಡ್ಡಿ ವೆಚ್ಚ</th></tr>
<tr><td>ಕ.ರಾ.ರ.ಸಾ.ನಿಗಮ</td><td>173.34</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>575.574</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>119.19</td></tr>
<tr><td>ಕ.ಕ.ರ.ಸಾ.ನಿಗಮ</td><td>332.00</td></tr>
<tr><td>ಒಟ್ಟು</td><td>1200.104</td></tr>
</table>
ಸದರಿ ನಾಲ್ಕು ಸಾರಿಗೆ ಸಂಸ್ಥೆಗಳು ಸಾಲಗಳ ಮೇಲೆ ಕಳೆದ ಮೂರು ವರ್ಷಗಳಲ್ಲಿ ಪಾವತಿ ಮಾಡಲಾದ ಬಡ್ಡಿಯ ವಿವರ ಕೆಳಕಂಡಂತಿದೆ:<br><br>
(ರೂ. ಕೋಟಿಗಳಲ್ಲಿ)
<table>
<tr><th>ಸಂಸ್ಥೆಗಳು</th><th>ಆರ್ಥಿಕ ವರ್ಷ</th><th>ಬಡ್ಡಿ ವೆಚ್ಚ</th></tr>
<tr><td rowspan="3">ಕ.ರಾ.ರ.ಸಾ.ನಿಗಮ</td><td>2020-21</td><td>31.53</td></tr>
<tr><td>2021-22</td><td>25.51</td></tr>
<tr><td>2022-23</td><td>19.83</td></tr>
<tr><td rowspan="3">ಬೆಂ.ಮ.ಸಾ.ಸಂಸ್ಥೆ</td><td>2020-21</td><td>57.57</td></tr>
<tr><td>2021-22</td><td>68.31</td></tr>
<tr><td>2022-23</td><td>59.88</td></tr>
<tr><td rowspan="3">ವಾ.ಕ.ರ.ಸಾ.ಸಂಸ್ಥೆ</td><td>2020-21</td><td>21.84</td></tr>
<tr><td>2021-22</td><td>21.19</td></tr>
<tr><td>2022-23</td><td>17.49</td></tr>
<tr><td rowspan="3">ಕ.ಕ.ರ.ಸಾ.ನಿಗಮ</td><td>2020-21</td><td>7.37</td></tr>
<tr><td>2021-22</td><td>5.67</td></tr>
<tr><td>2022-23</td><td>7.10</td></tr>
</table>
</td></tr>
<tr><td>ಈ.</td><td>ಸಾರಿಗೆ ಇಲಾಖೆಯ ನಿಗಮದಲ್ಲಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರೊಂದಿಗೆ ಪ್ರತಿ ವರ್ಷ ಒಪ್ಪಂದ ಕರಾರೂ ಮಾಡಿಕೊಳ್ಳಲಾಗಿದೆಯೇ; ನಿಗಮದ ಖಾಯಂ ನೌಕರರಿಗೆ 2020ನೇ ಸಾಲಿನಿಂದ ವೇತನದಲ್ಲಿ ಯಾ</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಗುತ್ತಿಗೆ/ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರೊಂದಿಗೆ ಒಪ್ಪಂದ ಕರಾರು ಮಾಡಿಕೊಳ್ಳುವುದಿಲ್ಲ. ಆದರೆ, ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳ ಸೇವೆ ನೀಡುತ್ತಿರುವ ಏಜೆನ್ಸಿಗಳೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ.</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ವುದೇ ಹೆಚ್ಚಳ ಮಾಡದಿರಲು ಕಾರಣಗಳೇನು; ಹಾಗೂ ಈ ನಿಗಮಗಳು ಖಾಯಂ ನೌಕರರಿಗೆ ಯಾವುದೇ ರೀತಿಯ ಬಾಕಿ ಪಾವತಿಸದೇ ಬಾಕಿ ಉಳಿಸಿ ಕೊಂಡಿದ್ದು ಬಾಕಿ ಮೊತ್ತವನ್ನು ಯಾವಾಗ ಪಾವತಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಅಧಿಕಾರಿ/ ನೌಕರರಿಗೆ ದಿನಾಂಕ: **31.12.2019**ರಂದು ಪಡೆಯುತ್ತಿದ್ದ ಮೂಲ ವೇತನವನ್ನು ಶೇ.**15**ರಷ್ಟು ಹೆಚ್ಚಿಸಿ ಅದರಂತೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ದಿನಾಂಕ:**01.03.2023**ರಿಂದ ಜಾರಿಗೊಳಿಸಸಲಾಗಿದೆ.<br><br>ಪ್ರಸ್ತುತ ಸಾರಿಗೆ ಸಂಸ್ಥೆಗಳು ಇಂಧನ ವೆಚ್ಚ ಹಾಗೂ ಕಾಲಿಕವಾಗಿ ಹೆಚ್ಚಳವಾಗುತ್ತಿರುವ ತುಟ್ಟಿಭತ್ಯೆ ಹಾಗೂ ಇತರೆ ಕಾರ್ಯಾಚರಣೆ ವೆಚ್ಚದಲ್ಲಿ ಏರಿಕೆ ಉಂಟಾಗಿರುವುದರಿಂದ, ತೀವ್ರ ನಗದು ಕೊರತೆಯನ್ನು ಎದುರಿಸುತ್ತಿರುವ ಕಾರಣ, ವೇತನ ಪರಿಷ್ಕರಣೆಯ ಹಿಂಬಾಕಿ ಪಾವತಿ ಕುರಿತು ಶಿಫಾರಸ್ಸು ಮಾಡಲು ರಚಿಸಲಾಗಿರುವ ಏಕ ಸದಸ್ಯ ಸಮಿತಿಯು ಸಲ್ಲಿಸಿರುವ ವರದಿಯು ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ: ಟಿಡಿ 53 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

## K.S.R.T.C. CENTRAL OFFICES: C.E. DEPARTMENT: BANGALORE

### District wise details of Depots, Regional WorkShop and Divisional WorkShops

| Sl No | District | No.of Depots | Name of the Depots | Regional Workshop | Divisional Workshop |
|---|---|---|---|---|---|
| 1 | Bangalore (Urban) | 6 | 1) Depot-1 | 1 | 1 |
| | | | 2) Depot-2 | | |
| | | | 3) Depot-4 | | |
| | | | 4) Depot-5 | | |
| | | | 5) Depot-6 | | |
| | | | 6) Anekal | | |
| 2 | Bangalore (Rural) | 2 | 1) Nelamangala | | |
| | | | 2) Doddaballapura | | |
| 3 | Ramanagara | 5 | 1) Kanakapura | | 1 |
| | | | 2) Harohalli | | |
| | | | 3) Channapatna | | |
| | | | 4) Ramanagara | | |
| | | | 5) Magadi | | |
| 4 | Kolar | 5 | 1) Kolar | | 1 |
| | | | 2) K.G.F | | |
| | | | 3) Srinivasapura | | |
| | | | 4) Malur | | |
| | | | 5) Mulabagilu | | |
| 5 | Chikkaballapura | 5 | 1) Chikkaballapura | | 1 |
| | | | 2) Chintamani | | |
| | | | 3) Bagepalli | | |
| | | | 4) Gowribidanur | | |
| | | | 5) Siddlaghatta | | |
| 6 | Tumkur | 8 | 1) Tumkur -1 | | 1 |
| | | | 2) Tumkur -2 | | |
| | | | 3) Kunigal | | |
| | | | 4) Turuvekere | | |
| | | | 5) Tiptur | | |
| | | | 6) Madhugiri | | |
| | | | 7) Sira | | |
| | | | 8) Pavagada | | |
| 7 | Davangere | 3 | 1) Davangere-1 | | 1 |
| | | | 2) Davangere-2 | | |
| | | | 3) Harihara | | |
| 8 | Shivamogga | 5 | 1) Shimoga | | 1 |
| | | | 2) Bhadravathi | | |
| | | | 3) Sagar | | |
| | | | 4) Honnali | | |
| | | | 5) Shikaripura | | |

| Sl No | District | No.of Depots | Name of the Depots | Regional Workshop | Divisional Workshop |
|---|---|---|---|---|---|
| 9 | Chitradurga | 3 | 1) Chitradurga | | 1 |
| | | | 2) Challakere | | |
| | | | 3) Hosadurga | | |
| 10 | Mysore | 10 | 1) Nanjanagud | | 2 |
| | | | 2) Kuvempunagara | | |
| | | | 3) Sathagalli | | |
| | | | 4) Vijayanagara | | |
| | | | 5) Myore Moffusil Depot-1 | | |
| | | | 6) Myore Moffusil Depot-3 | | |
| | | | 7) K.R.Nagara | | |
| | | | 8) Hunsur | | |
| | | | 9) H.D.Kote | | |
| | | | 10) Piriyapatna | | |
| 11 | Mandya | 6 | 1) Mandya | | 1 |
| | | | 2) Maddur | | |
| | | | 3) Malavalli | | |
| | | | 4) Pandavapura | | |
| | | | 5) Nagmangala | | |
| | | | 6) K.R.Pete | | |
| 12 | Chikkamagalur | 3 | 1) Chikkamagalur | | 1 |
| | | | 2) Kadur | | |
| | | | 3) Mudigere | | |
| 13 | Hassan | 9 | 1) Hassan Depot -1 | 1 | 1 |
| | | | 2) Hassan Depot -2 | | |
| | | | 3) H.N.Pura | | |
| | | | 4) C.R.Patna | | |
| | | | 5) Ramanathapura | | |
| | | | 6) Arkalgud | | |
| | | | 7) Arasikere | | |
| | | | 8) Sakaleshpura | | |
| | | | 9) Belur | | |
| 14 | Dakshina Kannada | 3 | 1) Mangalore-1 | | 1 |
| | | | 2) Mangalore-2 | | |
| | | | 3) Mangalore-3 | | |
| 15 | Udupi | 2 | 4) Kundapura | | |
| | | | 5) Udupi | | |
| 16 | Puttur | 5 | 1) Puttur | | 1 |
| | | | 2) B.C.Road | | |
| | | | 3) Dharmastala | | |
| | | | 4) Madikeri | | |
| | | | 5) Sullya | | |
| 17 | Chamarajanagara | 3 | 1) Chamarajanagara | | 1 |
| | | | 2) Kollegala | | |
| | | | 3) Gundlupet | | |
| | **Total** | **83** | | **2** | **16** |

(signature)

**Chief Civil Engineer**

# ಅನುಬಂಧ – 1

| ಘಟಕಗಳು | |
|---|---|
| ಘಟಕ – 2 ಶಾಂತಿನಗರ | ಘಟಕ – 28 ಹೆಬ್ಬಾಳ |
| ಘಟಕ – 3 ಶಾಂತಿನಗರ | ಘಟಕ – 29 ಐ.ಟಿ.ಐ |
| ಘಟಕ – 4 ಜಯನಗರ | ಘಟಕ – 30 ಯಲಹಂಕ |
| ಘಟಕ – 6 ಇಂದಿರಾನಗರ | ಘಟಕ – 31 ಶ್ರೀಗಂಧದ ಕಾವಲ್ (ಸುಮ್ಮನಹಳ್ಳಿ) |
| ಘಟಕ – 7 ಸುಭಾಷ್‌ನಗರ | ಘಟಕ – 32 ಸೂರ್ಯಸಿಟಿ (ಚಂದಾಪುರ) |
| ಘಟಕ – 8 ಯಶವಂತಪುರ | ಘಟಕ – 33 ಪೂರ್ಣಪ್ರಜ್ಞ ಲೇಔಟ್ |
| ಘಟಕ – 9 ಪೀಣ್ಯ | ಘಟಕ – 34 ಕೊತ್ತನೂರು ದಿಣ್ಣೆ |
| ಘಟಕ – 10 ಹೆಣ್ಣೂರು | ಘಟಕ – 35 ಕನ್ನಳ್ಳಿ |
| ಘಟಕ – 11 ಯಲಹಂಕ | ಘಟಕ – 36 ಬಿಡದಿ – ಇಂಡಸ್ಟ್ರಿಯಲ್ ಏರಿಯ |
| ಘಟಕ – 12 ಕೆಂಗೇರಿ | ಘಟಕ – 37 ಕೆಂಗೇರಿ |
| ಘಟಕ – 13 ಕತ್ರಿಗುಪ್ಪೆ | ಘಟಕ – 38 ಚಿಕ್ಕನಾಗಮಂಗಲ |
| ಘಟಕ – 14 ಆರ್.ಟಿ. ನಗರ (ಗಂಗೇನಹಳ್ಳಿ) | ಘಟಕ – 39 ಹೊಸಕೋಟೆ |
| ಘಟಕ – 15 ಕೋರಮಂಗಲ | ಘಟಕ – 40 ದಾಸನಪುರ |
| ಘಟಕ – 16 ದೀಪಾಂಜಲಿ ನಗರ | ಘಟಕ – 41 ಗುಂಜೂರು |
| ಘಟಕ – 17 ಚಂದ್ರಲೇಔಟ್ | ಘಟಕ – 42 ಕೊಡತಿ |
| ಘಟಕ – 18 ವೈಟ್‌ಫೀಲ್ಡ್ (ಐ.ಟಿ.ಪಿ.ಎಲ್) | ಘಟಕ – 43 ಶಿವನಪುರ |
| ಘಟಕ – 19 ಎಲೆಕ್ಟ್ರಾನಿಕ್ ಸಿಟಿ | ಘಟಕ – 44 ಅಂಜನಾಪುರ 10ನೇ ಬ್ಲಾಕ್ |
| ಘಟಕ – 20 ಬನಶಂಕರಿ (ಕರೀಸಂದ್ರ) | ಘಟಕ – 45 ಎಂ.ಎಸ್.ಪಾಳ್ಯ |
| ಘಟಕ – 21 ರಾಜರಾಜೇಶ್ವರಿ ನಗರ | ಘಟಕ – 46 ಸಾದೇನಹಳ್ಳಿ |
| ಘಟಕ – 22 ಪೀಣ್ಯ | ಘಟಕ – 47 ಮಂಡೂರು |
| ಘಟಕ – 23 ಹೆಚ್.ಆರ್.ಬಿ.ಆರ್ , 1ನೇ ಬ್ಲಾಕ್ (ಕಲ್ಯಾಣನಗರ) | ಘಟಕ – 48 ಭೈರತಿ |
| ಘಟಕ – 24 ಐ.ಟಿ.ಐ | ಘಟಕ –49 ಬಿಡದಿ |
| ಘಟಕ – 25 ಹೆಚ್.ಎಸ್.ಆರ್ ಲೇಔಟ್ | ಘಟಕ –50 ದೇವನಹಳ್ಳಿ |
| ಘಟಕ – 26 ಯಶವಂತಪುರ | ಘಟಕ – 51 ಸಾದರಮಂಗಲ |
| ಘಟಕ – 27 ಜಿಗಣಿ | |

**ಕೇಂದ್ರೀಯ ಕಾರ್ಯಾಗಾರಗಳು**

1. ಶಾಂತಿನಗರ
2. ದೂರವಾಣಿ ನಗರ
3. ಚಲ್ಲಘಟ್ಟ
4. ದಾಸನಪುರ

Executive Engineer
B.M.T.C. CE Division
Bangalore - 560 027

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

| ಕ್ರಸಂ | ಜಿಲ್ಲೆ | ಘಟಕಗಳ ಸಂಖ್ಯೆ | ಕಾರ್ಯಾಗಾರಗಳ ಸಂಖ್ಯೆ |
|---|---|---|---|
| 1 | ಧಾರವಾಡ | 10 | 03 |
| 2 | ಬೆಳಗಾವಿ | 15 | 02 |
| 3 | ಉತ್ತರಕನ್ನಡ | 08 | 01 |
| 4 | ಹಾವೇರಿ | 06 | 01 |
| 5 | ಗದಗ | 08 | 01 |
| 6 | ಬಾಗಲಕೋಟ | 08 | 01 |
| | ಒಟ್ಟು | **55** | **09** |

::ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಛೇರಿ : ಕಲಬುರಗಿ::

ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) ವಿಧಾನ ಪರಿಷತ್ತ್ ಸದಸ್ಯರು ರವರ ಪ್ರಶ್ನೆ ಸಂಖ್ಯೆ 715 ಕ್ಕೆ ಹೆಚ್ಚುವರಿ ಮಾಹಿತಿ.

| ಕ್ರಸಂ | ಜಿಲ್ಲೆ | ವಿಭಾಗಗಳು | ಘಟಕಗಳು | ವಿಭಾಗೀಯ ಕಾರ್ಯಾಗಾರಗಳು | ಪ್ರಾದೇಶಿಕ ಕಾರ್ಯಾಗಾರ |
|---|---|---|---|---|---|
| 1 | ಕಲಬುರಗಿ | ಕಲಬುರಗಿ-1 | ಕಲಬುರಗಿ-1 | ಕಲಬುರಗಿ-1 | – |
| 2 | | | ಚಿಂಚೋಳಿ | | |
| 3 | | | ಚಿತ್ತಾಪುರ | | |
| 4 | | | ಕಾಳಗಿ | | |
| 5 | | | ಸೇಡಂ | | |
| 6 | | | ಕಲಬುರಗಿ-4 | | |
| 7 | | ಕಲಬುರಗಿ-2 | ಕಲಬುರಗಿ-2 | ಕಲಬುರಗಿ-2 | |
| 8 | | | ಕಲಬುರಗಿ-3 | | |
| 9 | | | ಆಳಂದ | | |
| 10 | | | ಜೇವರ್ಗಿ | | |
| 11 | | | ಅಫಜಲಪೂರ | | |
| 12 | ಯಾದಗಿರಿ | ಯಾದಗಿರಿ | ಯಾದಗಿರಿ | ಯಾದಗಿರಿ | ಯಾದಗಿರಿ |
| 13 | | | ಶಹಪುರ | | |
| 14 | | | ಗುರಮಿಟ್‌ಕಲ್ | | |
| 15 | | | ಸುರಪುರ | | |
| 16 | ಬೀದರ | ಬೀದರ | ಬೀದರ-1 | ಬೀದರ | – |
| 17 | | | ಬೀದರ-2 | | |
| 18 | | | ಹುಮನಾಬಾದ | | |
| 19 | | | ಬಸವಕಲ್ಯಾಣ | | |
| 20 | | | ಭಾಲ್ಕಿ | | |
| 21 | | | ಔರಾದ | | |
| 22 | ರಾಯಚೂರು | ರಾಯಚೂರು | ರಾಯಚೂರು-2 | ರಾಯಚೂರು | – |
| 23 | | | ರಾಯಚೂರು-3 | | |
| 24 | | | ಲಿಂಗಸುಗೂರು | | |
| 25 | | | ಸಿಂಧನೂರು | | |
| 26 | | | ಮಾನವಿ | | |
| 27 | | | ದೇವದುರ್ಗ | | |
| 28 | | | ಮಸ್ಕಿ | | |
| 29 | ಕೊಪ್ಪಳ | ಕೊಪ್ಪಳ | ಕೊಪ್ಪಳ | ಕೊಪ್ಪಳ | – |
| 30 | | | ಕುಷ್ಟಗಿ | | |
| 31 | | | ಗಂಗಾವತಿ | | |
| 32 | | | ಯಲಬುರ್ಗ | | |
| 33 | | | ಕುಕನೂರು | | |
| 34 | ಬಳ್ಳಾರಿ | ಬಳ್ಳಾರಿ | ಬಳ್ಳಾರಿ-1 | ಬಳ್ಳಾರಿ | – |
| 35 | | | ಬಳ್ಳಾರಿ-2 | | |
| 36 | | | ಬಳ್ಳಾರಿ-3 | | |
| 37 | | | ಸಿರಗುಪ್ಪ | | |
| 38 | | | ಕುರಗೋಡ | | |
| 39 | | | ಸಂಡೂರು | | |
| 40 | ಹೊಸಪೇಟೆ | ಹೊಸಪೇಟೆ | ಹೊಸಪೇಟೆ | ಹೊಸಪೇಟೆ | – |
| 41 | | | ಕೂಡ್ಲಗಿ | | |
| 42 | | | ಹಡಗಲಿ | | |
| 43 | | | ಹ.ಬೊ.ಹಳ್ಳಿ | | |
| 44 | | | ಹರಪನ ಹಳ್ಳಿ | | |
| 45 | ವಿಜಯಪುರ | ವಿಜಯಪುರ | ವಿಜಯಪುರ-1 | ವಿಜಯಪುರ | – |
| 46 | | | ವಿಜಯಪುರ-2 | | |
| 47 | | | ವಿಜಯಪುರ-3 | | |
| 48 | | | ಇಂಡಿ | | |
| 49 | | | ಸಿಂದಗಿ | | |
| 50 | | | ಮುದ್ದೇಬಿಹಾಳ | | |
| 51 | | | ತಾಳಿಕೋಟೆ | | |
| 52 | | | ಬ.ಬಾಗೇವಾಡಿ | | |